**ಸಿ.ಸಿ. ನಂ. 8861/2015 ಪ್ರಾ.ಸಃ 4 ಚಾ.ಸಃ 5**

**ದಿನಾಂಕಃ 18/11/2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ ಎಸ್.ಎನ್ ಆರ್ ಆರೋಪಿ ಪರ ವಕೀಲರಿಂದಃ

ನಾನು ಮಾಗಡಿಯಲ್ಲಿ ವಾಸವಿದ್ದೇನೆ. ಚಾಸಾ.1 ರವರ ತಂದೆ ನಮ್ಮ ಊರಿನಲ್ಲಿ ಬಂಡೆ ಕೆಲಸ ಮಾಡುತ್ತಿದ್ದರು, ಆಗಾಗಿ ನನಗೆ ಅವರ ಪರಿಚಯ ಇದೆ. ನಾನು ಮಾಗಡಿಯಲ್ಲಿ ಚಿಲ್ಲರೆ ಅಂಗಡಿ ಇಟ್ಟಿದ್ದೇನೆ. ನಮ್ಮ ಊರಿನಿಂದ ಚಾಸಾ.1 ರವರ ಮನೆ 1 ಕಿ ಮೀ ಅಂತರದಲ್ಲಿದೆ. ನಾನು ಬೇರೆ ಯಾವುದೇ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಹಾಜರಾಗಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ದಿ. 17/07/2014 ರಲ್ಲಿ ತಿಲಕ್ ನಗರ ಪೊ.ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ನಾನು ಚಾಸಾ.1 ರವರ ನಿಶ್ಚಿತಾರ್ಥ ಕಾರ್ಯಕ್ರಮಕ್ಕೆ ಹೋಗಿದ್ದೆ. ಮದುವೆಗೆ ಎರಡು ತಿಂಗಳ ಮುಂಚೆ ನಿಶ್ಚಿತಾರ್ಥ ಕಾರ್ಯವಾಗಿರುತ್ತದೆ. ಆದರೆ ನಿಖರವಾದ ದಿನಾಂಕ ನನಗೆ ನೆನಪಿರುವುದಿಲ್ಲ. ನನಗೆ ಚಾಸಾ.1 ಚಿಕ್ಕ ವಯಸ್ಸಿನಿಂದಲೂ ಪರಿಚಯ ಇದ್ದಾಳೆ. ಆಕೆ ಮದುವೆಗೆ ಮುಂಚೆ ಒಂದು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಳು. ದಿ. 13/03/2013 ರಂದು ಚಾಸಾ.1 ರವರ ನಿಶ್ಚಿತಾರ್ಥವಾಗಿದೆ ಎಂದು ಹೇಳಿದ್ದೇನೆ ಎಂದರೆ ಪೊಲೀಸರು ಆ ರೀತಿ ಬರೆದುಕೊಂಡಿರುತ್ತಾರೆ. ಚಾಸಾ.1 ರವರ ತಂದೆ ಆರ್ಥಿಕವಾಗಿ ಬಡವರು ಎಂದರೆ ಸರಿಯಲ್ಲ. ನಿಶ್ಚಿತಾರ್ಥ ಕಾರ್ಯದಲ್ಲಿ ಪೊಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿ. ಈಗ ನ್ಯಾಯಲಯದ ಮುಂದೆ ನಾನು ನೋಡುತ್ತಿರುವ ಪೊಟೋದಲ್ಲಿ ನನ್ನ ಭಾವಚಿತ್ರದಲ್ಲಿ ನಾನು ಇಲ್ಲ ಎಂದರೆ ಸರಿ. ಆದರೆ ನಾನು ನಿಶ್ಚಿತಾರ್ಥ ದ ಬೇರೆ ಭಾವಚಿತ್ರದಲ್ಲಿ ಇದ್ದೇನೆ . ಸಾಮಾನ್ಯವಾಗಿ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ವಧು-ವರರು ಉಂಗುರ ಬದಲಾವಣೆ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಆ ರೀತಿ ಉಂಗುರು ಬದಲಾವಣೆ ಮಾಡುವ ಬಗ್ಗೆ ಯಾವುದೇ ಬೇಡಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಮತ್ತು ನಿಶ್ಚಿತಾರ್ಥ ಕಾರ್ಯಕ್ರಮಕ್ಕೆ ಒಡವೆ ಖರೀದಿ ಮಾಡಿದ ಬಗ್ಗೆ ಚಾಸಾ1 ರವರು ರಶೀದಿಗಳನ್ನು ನನಗೆ ತೋರಿಸಿರುವುದಿಲ್ಲ. ಮದುವೆ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ 3 ಲಕ್ಷ ಹಣವನ್ನು ರೂ. 500/- ಮುಖ ಬೆಲೆಯ ನೋಟುಗಳಲ್ಲಿ ಆರೋಪಿತರಿಗೆ ನೀಡಲಾಗಿದೆ. ಸದರಿ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಶ್ಚಿತಾರ್ಥದ ಸಮಯದಲ್ಲಿ ಇದ್ದ ಎಲ್ಲಾ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ನಾನು ಮದುವೆ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಭಾಗವಹಿಸದ ಕಾರಣಕ್ಕೆ ನನಗೆ ಆಗ ಅಲ್ಲಿದ್ದವರ ಹೆಸರುಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡುವ ಮುಂಚೆ ಗಲಾಟೆಯಾಗಿದ್ದ ವಿಚಾರ ನನಗೆ ಗೊತ್ತಾಗಿರುತ್ತದೆ. ಆರೋಪಿತರು ಗುರುಪ್ಪನ ಪಾಳ್ಯದಲ್ಲಿ ವಾಸವಾಗಿದ್ದಾರೆ. ಮದುವೆ ಸಂಪೂರ್ಣ ಖರ್ಚನ್ನು ಆರೋಪಿತರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಗೆ ಒಡವೆಗಳನ್ನು ಖರೀದಿ ಮಾಡಿದ ಬಗ್ಗೆ ಆರೋಪಿತರ ಬಳಿ ರಶೀದಿಗಳು ಇರುವ ವಿಚಾರ ನನಗೆ ಗೊತ್ತಿಲ್ಲ. ಬೀಗರ ಊಟಕ್ಕೆ ಆರೋಪಿತರ ತಂದೆ 1.5 ಲಕ್ಷ ಖರ್ಚು ಮಾಡಿರುವ ವಿಚಾರ ನನಗೆ ಗೊತ್ತು. ಮದುವೆಯಾದ ನಂತರ ಚಾಸಾ.1 ಆಕೆಯ ಗಂಡನ ಮನೆಯಲ್ಲಿ ವಾಸವಾಗಿದ್ದಳು. ಆ ನಂತರ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಮದುವೆಯಾದ ನಂತರ ಚಾಸಾ.1 ಪ್ರತಿ ಭಾನುವಾರ ತನ್ನ ತವರು ಮನೆಗೆ

ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಕೆ ಆರೊಪಿತರಿಗೆ ಹೇಳದೆ ಕೇಳದೆ ತನ್ನ ತವರು ಮನೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬಾಡಿಗೆಗೆ ಹಿಡಿದುಕೊಂಡಾಗ ಮುಂಗಡ ಹಣ ನೀಡಿದವರ ಹೆಸರಿಗೆ ಕರಾರು ಮಾಡಿಕೊಡುತ್ತಾರೆ ಎಂದರೆ ಸರಿ. ಚಾಸಾ.1 ರವರ ತಂದೆಯಿಂದ ಹಣ ಪಡೆದುಕೊಂಡು ಒಂದನೇ ಆರೋಪಿತರ ತಾಯಿಯ ಹೆಸರಿಗೆ ಮನೆಯ ಬೋಗ್ಯ ಪತ್ರವನ್ನು ಮಾಡಿಕೊಂಡಿರುತ್ತಾರೆ. ಚಾಸಾ.1 ಮತ್ತು ಅವರ ಕುಟುಂಬದವರ ಮೇಲೆ ಸಿಸಿ ನಂ. 27746/2017 ಪ್ರಕರಣ ದಾಖಲು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ.1 ಆರೋಪಿತರ ವಿರುದ್ಧ ಡಿವಿ ಕಾಯ್ದೆ ಯಡಿಯಲ್ಲಿ ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಚಾರ ವಜಾ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ಚಾಸಾ.1 ರವರಿಂದ ತಿಳಿದುಕೊಂಡಿರುವುದಿಲ್ಲ. ಒಂದನೇ ಆರೋಪಿ ಚಾಸಾ.1 ರವರ ಮೇಲೆ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಚಾಸಾ.1 ಆರೋಪಿತನಿಗೆ ದೌರ್ಜನ್ಯ ಎಸಗಿರುವ ಕಾರಣಕ್ಕೆ ಮಾನ್ಯ ನ್ಯಾಯಲಯದಲ್ಲಿ ವಿಚ್ಛೇದನ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಚಾಸಾ.1 ರವರಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಚಾಸಾ.1 ರವರ ತಂದೆ ಬಿಪಿಎಲ್ ಕಾರ್ಡ್ ಹೊಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪಿರ್ಯಾದುದಾರರ ಮನೆಗೆ ಹೋಗಿದ್ದ ದಿನಾಂಕಗಳು ಈಗ ನನಗೆ ನೆನಪಿಲ್ಲ. ಆರೋಪಿತರು ಚಾಸಾ.1 ರವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿದ ಬಗ್ಗೆ ನಾನು ಪ್ರತ್ಯೇಕ್ಷವಾಗಿ ನೋಡಿಲ್ಲ ಆದರೆ ಆ ಬಗ್ಗೆ ಚಾಸಾ.1 ರವರು ನನಗೆ ತಿಳಿಸಿರುತ್ತಾರೆ. ಆರೋಪಿತರು ಚಾಸಾ.1 ರವರಿಗೆ ಹಲ್ಲೆ ಮಾಡಿದ ಬಗ್ಗೆ ಚಾಸಾಡ.1 ರವರು ಚಿಕಿತ್ಸೆ ಪಡೆದುಕೊಂಡಿದ್ದರ ವೈದ್ಯರ ಚೀಟಿಗಳನ್ನು ನನಗೆ ತಿಳಿಸಿರುವುದಿಲ್ಲ. ಚಾಸಾ.1 ಮತ್ತು ಒಂದನೇ ಆರೋಪಿ ವಿದ್ಯಾವಂತರು ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಮಾತುಕತೆಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ವರದಕ್ಷಿಣೆ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ.1 ರವರ ಮನೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಾಕಷ್ಟು ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ